ಕೆ.ವಿ. ಮಂಜುನಾಥ್, ಕೆ.ಟಿ. ಹಳ್ಳಿ

ಕಾರ್ಲ್‌ಮಾರ್ಕ್ಸ್ ಅಷ್ಟು ದಪ್ಪ ಗಡ್ಡ ಬಿಟ್ಟಿರುವುದು ಏಕೆ?



ಅವರನ್ನು ಹಿಡಿದು ಜಗ್ಗಾಡುವವರು ಅನೇಕರಿದ್ದರು. ತೆಳು ಗಡ್ಡವಾದರೆ ಕೈಗೆ ಬಂದುಬಿಡುತ್ತಿತ್ತು.

ಬಿ. ಚಂದ್ರೇಗೌಡ, ಬೆಂಗಳೂರು

ಪ್ರಾಣಿಬೇಟೆಗೂ, ಮತಬೇಟೆಗೂ ಏನು ವ್ಯತ್ಯಾಸ?

ಅಲ್ಲಿ ಗುಂಡು ಹಾರಿಸುತ್ತಾರೆ; ಇಲ್ಲಿ ಗುಂಡು ಏರಿಸುತ್ತಾರೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಸಂಪತ್ತು ಕೆಲವೊಮ್ಮೆ ಆಪತ್ತು ಎನ್ನುವರಲ್ಲ...?

ಐಟಿ, ಸಿಬಿಐಯಿಂದ ಕಳ್ಳ ರೈಡ್ ಆದರೆ ಮಾತ್ರ.

ಜಯಶ್ರೀ, ಬೆಂಗಳೂರು

ರಾಮಾಯಣದಲ್ಲಿ ಮಂಥರೆಯು, ಮಹಾಭಾರತದಲ್ಲಿ ಶಕುನಿಯು ಇಲ್ಲದಿದ್ದರೆ ಏನಾಗುತ್ತಿತ್ತು?



ಶೂರ್ಪನಖಿಯು ಅಯೋಧ್ಯೆಗೇ ಬಂದು ವರಿಸೆನ್ನುತ್ತಿದ್ದಳು; ದುರ್ಯೋಧನನೇ ಜೂಜಿನಲ್ಲಿ ಪಂಟರ್ ಆಗುತ್ತಿದ್ದ.

ಅಮರಯ್ಯಾ ಪತ್ರಿಮಠ, ಸುರಪುರ

ವಿಮಾನಯಾನಕ್ಕೂ, ಜೀವನಯಾನಕ್ಕೂ ಅಂತರವೇನು?

ಜೀವನಯಾನದಲ್ಲಿ 'ನೀವು ಮುಳುಗುವ ಸಂದರ್ಭ ಬಂದಿದೆ' ಎಂದರೆ 'ಅಪಶಕುನದವಳೇ' ಎಂದು ಬೈಯುತ್ತಾರೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ದೇಗುಲಗಳ ಮುಂದೆ ಭಿಕ್ಷೆ ಬೇಡುವ ಭಿಕ್ಷುಕರು ದೇವರನ್ನು ನೋಡುವ ಭಕ್ತರಾಗುವುದು ಯಾವಾಗ?

ಕಾಯಕವೇ ಕೈಲಾಸ ಎಂಬುದನ್ನು ಅನುಷ್ಠಾನಕ್ಕೆ ತಂದಾಗ.

ಮಹಾವೀರ ಕಾಸರ, ಶಿವಮೊಗ್ಗ

ಹಳ್ಳಿ, ಪಟ್ಟಣ, ನಗರಗಳ ಹೆಸರು ಬದಲಾಯಿಸಿದ ಮಾತ್ರಕ್ಕೆ ಅಭಿವೃದ್ಧಿ ಆದಂತೆಯೆ?

ನಿಶ್ಚಿತವಾಗಿ – ಬೋರ್ಡು ಬರೆಯುವವರದು!

ದಿನೇಶ್, ಗುಡ್ಡದೂರು

ಇತ್ತೀಚೆಗೆ ಚಲನಚಿತ್ರಗಳ ಮುಕ್ತಾಯದಲ್ಲಿ 'ಶುಭಂ' ಟೈಟಲ್ ಕಾರ್ಡ್ ಮಾಯವಾಗಿದೆಯಲ್ಲ?

ಭಾಗ 1, ಭಾಗ 3ನ್ನು ತೆಗೆಯುವ ಆಲೋಚನೆ ಇರುತ್ತದಲ್ಲ!

ರಾಜಶೇಖರ ಹಾದಿಮನಿ, ಧಾರವಾಡ

ಮಠಗಳಲ್ಲಿ ತೊಟ್ಟಿಲು ತೂಗಬಾರದು ಎನ್ನುವ ನಂಬಿಕೆ ಈಗ ಸುಳ್ಳಾಗಿದೆ. ಇದಕ್ಕೇನಂತೀರಿ?

ಮಕ್ಕಳು ದೇವರ ಸಮಾನ. ದೇವನಿಗೆ ತೊಟ್ಟಿಲಿನ ಸೇವೆ ಇರುವಾಗ...

ಬಿ.ಆರ್. ಉಷಾ, ಬೆಂಗಳೂರು

ಸೂರ್ಯನಿಗೆ ರಜಾ ಬೇಕಂತೆ ರಾಂ. ಕೊಡ್ತೀರಾ?

ಧಾರಾಳವಾಗಿ. ಶರದೃತುವಿನಲ್ಲಿ ಮೋಡವನ್ನು ಹೊದ್ದು ಮಲಗಲು ಅನುಮತಿಸಿದ್ದೇನೆ.

ಅನಸೂಯಾ ಟಿ, ಕೇದಿಗೆಮನೆ

ಕನ್ನಡಕ ಹುಡುಕಲಿಕ್ಕೆ ಕನ್ನಡಕ ಹುಡುಕೋ ಕನ್ನಡಕ ಬೇಕಂತೆ ನನ್ನ ಮಾವನವರಿಗೆ. ಎಲ್ಲಿ ಸಿಗುತ್ತೆ?

ಮನೆಯಲ್ಲೇ – ಅದನ್ನು ಮುದ್ದಿನ ಸೊಸೆ/ ಮೊಮ್ಮಗು ಎಂದು ಕರೆಯುತ್ತಾರೆ.

ಪ್ರಕಾಶ ಮೂಲ್ಕಿ, ಕುಳಾಯಿ

ಸೆಲೆಬ್ರಿಟಿಗಳೆಲ್ಲ ದೀರ್ಘಕಾಲದ, ಬಾಲ್ಯದ ಗೆಳತಿ/ ಗೆಳೆಯರನ್ನೇ ಮದುವೆ ಆಗುವುದು ಏಕೆ?

ಮಿಕ್ಕವರೆಲ್ಲ ಅವರಿಗಿಂತ ಅವರ ಅಂತಸ್ತಿಗೆ ಸಂಗಾತಿಗಳಾಗಲು ಬಯಸುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿ ನೀವು ಎತ್ತರದ ವ್ಯಕ್ತಿಯಾಗಿದ್ದೀರಲ್ಲ ರಾಮ್‌ಜೀ?

ಪ್ರಶ್ನಿಸುವ ಗುರುಸ್ಥಾನ ನಿಮ್ಮದು. ಪಾಸಾಗಲು ಹೆಣಗಾಡುವ ವಿದ್ಯಾರ್ಥಿನಿ ನಾನು.

## ಬಹುಮಾನಿತ ಪ್ರಶ್ನೆ

ಎಲ್.ಐ.ಸಿ. ವಿಜೇಂದ್ರ, ಮೈಸೂರು

ರಾಜಕಾರಣಿಗಳೇಕೆ ತಮ್ಮ ಹೆಂಡತಿಯರ ಬಳಿಯೇ ಸಾಲ ಮಾಡಿರುವುದು?

ಅವರ ಯೋಗ್ಯತೆ ಗೊತ್ತಿರುವ ಇನ್ನಾರೂ ಅವರಿಗೆ ಸಾಲ ಕೊಡುವುದಿಲ್ಲವಲ್ಲ!

ಐಶ್ವರ್ಯ ಬಿದರಹಳ್ಳಿ, ಹಿರೇಹಡಗಲಿ

ಉತ್ಸಾಹಕ್ಕೂ, ಪ್ರೋತ್ಸಾಹಕ್ಕೂ ವ್ಯತ್ಯಾಸವೇನು?

ಉತ್ಸಾಹ ಬಲೂನು; ಪ್ರೋತ್ಸಾಹ ಅದಕ್ಕೆ ತುಂಬುವ ಗಾಳಿ.

ಅಭಿಲಾಷಾ, ಬೆಂಗಳೂರು

ಜನ ಮೆಚ್ಚುವಂತೆ ಇರಬೇಕೋ, ದೇವರು ಮೆಚ್ಚುವಂತೆ ಇರಬೇಕೋ?

ಇವೆರಡೂ ಸುಲಭ. ನಿಮ್ಮ ಆತ್ಮಸಾಕ್ಷಿ ಮೆಚ್ಚುವಂತೆ ಇರಲು ಯತ್ನಿಸಿ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಇಲ್ಲೊಬ್ಬಳು ಕನ್ನಡಿಯಲ್ಲಿ ಪ್ರತಿಬಿಂಬ ನೋಡಿಕೊಂಡು ಕನ್ನಡಿಯನ್ನೇ ದೂರುತ್ತಿರುವಳಲ್ಲ...?



ಸೆಲ್ಫೀಯಲ್ಲಿ ಕಂಡ ಬಣ್ಣ ಕನ್ನಡಿಯಲ್ಲಿ ಕಾಣದಿರುವುದೇ ಕಾರಣವಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಅತಿಯಾದ ಮಾತು ಮನೆ ಕೆಡಿಸಿತು. ಅತಿಯಾದ ಊಟ?

ನರ್ಸಿಂಗ್ ಹೋಂಗಳನ್ನು ಬೆಳೆಸಿತು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಟೀವಿಗಾಗಿ ಧಾರಾವಾಹಿ ಮಾಡಬೇಕೆಂದಿರುವೆ. ಮೊದಲೇ ಕಥೆ ಬರೆಯಲೋ, ಪ್ರಸಾರವಾದಂತೆ ಬರೆಯುತ್ತಿರಲೋ?

ಕಥೆಯೆ? ಅದೇಕೆ ಬರೆಯುತ್ತೀರಿ? ಧಾರಾವಾಹಿಗಳಿಗೆ ಕಥೆ ಇರಬೇಕೆಂಬ ನಿಯಮವಿಲ್ಲ.

■ ರಾಮ್